ಅ) 1995-96ರ ಹಂಗಾಮನ್ನು ಕಾರ್ಖಾನೆಯು ದಿನಾಂಕ 9-12-95ರಂದು ಪ್ರಾರಂಭಿಸಿ ದಿನಾಂಕ 15-6-96ರವರೆಗೆ 189 ದಿವಸಗಳಲ್ಲಿ 2.46 ಲಕ್ಷ ಟನ್ ಕಬ್ಬನ್ನು ಅರೆದಿರುತ್ತದೆ.

ವಿಷಯ:- ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿಯ ಹಾಸ್ಟೆಲ್ ಸೂಪರಿಂಟೆಂಡೆಂಟ್ ಹುದ್ದೆಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 497 (665)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಲ್ಲಿ ಹಾಸ್ಟೆಲ್ ಸುಪರಿಂಟೆಂಡೆಂಟ್ 233 ಹುದ್ದೆಗಳಿಗೆ ದಿನಾಂಕ: 31-1-94ರಂದು ಅರ್ಜಿ ಕರೆದಿದ್ದು, ಇನ್ನುವರೆಗೆ ಆದೇಶ ಕೊಡದಿರಲು ಕಾರಣಗಳೇನು?

ಆ) ನೇಮಕಾತಿ ಆದೇಶ ಯಾವಾಗ ಕೊಡಲಾಗುವುದು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ) 31-3-94ರಲ್ಲಿ ಪ್ರಕಟಿಸಿದಂತೆ ಸಮಾಜ ಕಲ್ಯಾಣ ಇಲಾಖೆಯ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಖಾಲಿ ಇರುವ 233 ಹಾಸ್ಟೆಲ್ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಪರಿಶೀಲನೆ ಮಾಡಲಾಗಿದೆ. ಈ ಮಧ್ಯದಲ್ಲಿ ಸುಪ್ರಿಂ ಕೋರ್ಟ್ ಆದೇಶದ ಪ್ರಕಾರ ಮೀಸಲಾತಿ ಶೇಕಡಾ 50ಕ್ಕಿಂತ ಹೆಚ್ಚು ಮೀರಬಾರದೆಂದು ತೀರ್ಪು ನೀಡಿದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಸಕಇ 394 ಬಿಸಿಎ 94 ದಿನಾಂಕ: 14-2-96ರಲ್ಲಿ ಕ್ರೀಮಿ ಲೇಯರ್ ನೀತಿಯನ್ನು ದಿನಾಂಕ: 1-1-94ರಿಂದ ಪೂರ್ವಾನ್ವಯ ಜಾರಿಗೆ ಬರುವಂತೆ ಆದೇಶಿಸಿದೆ. ಅಂದರೆ ಸರ್ಕಾರದ 1ನೇ ದರ್ಜೆ ಅಥವಾ 2ನೇ ದರ್ಜೆ ಗಜೆಟೆಡ್ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ವೇತನ ಶ್ರೇಣಿ 2050ರಿಂದ 3950ರ ಮೇಲೆ ತಂದೆ ತಾಯಿ ಆದಾಯವನ್ನು ಪಡೆಯುತ್ತಿದ್ದರೆ, ಆದಾಯ ತೆರಿಗೆ ನಿರ್ಧರಣಕ್ಕೆ ಒಳಪಟ್ಟಿದ್ದರೆ ಮತ್ತು 8 ಹೆಕ್ಟೇರ್ ಮಳೆ ಆಧಾರಿತ ಅಥವಾ ತತ್ಸಮಾನ ಇತರೆ ಭೂಮಿಯನ್ನು ಹೊಂದಿದ್ದರೆ ಅಂತಹ ಅಭ್ಯರ್ಥಿಗಳು ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ. ಸರ್ಕಾರದ ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆ ವಿಳಂಬಗೊಂಡಿರುತ್ತದೆ. ಆದುದರಿಂದ ಪುನಃ ಖಾಲಿ ಹುದ್ದೆಗಳನ್ನು ಪ್ರಕಟಿಸಿ, ಅರ್ಜಿಗಳನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಮತ್ತೊಮ್ಮೆ ಹೊಸದಾಗಿ ಖಾಲಿ ಹುದ್ದೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ನೇಮಕಾತಿ ನಿಯಮದ ಪ್ರಕಾರ ನೇಮಕಾತಿ ಮಾಡಲು ಕ್ರಮ ಕೈಗೊಂಡ

ನಂತರ ನೇಮಕಾತಿ ಆದೇಶ ನೀಡಲಾಗುವುದು.

ವಿಷಯ:- ಧಾರವಾಡ ಜಿಲ್ಲೆಯಲ್ಲಿರುವ ವಸತಿ-ಪ್ರಸಾದ ನಿಲಯಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 498 (1014 ಎ)

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಂತ ಕಟ್ಟಡ ಇರುವ ಧಾರವಾಡ ಜಿಲ್ಲೆಯ ವಿವಿಧ ಬಗೆಯ ವಸತಿ:ಪ್ರಸಾದ ನಿಲಯಗಳ ಮಾಹಿತಿ ನೀಡುವುದು. ಈ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುವ ಪ್ರಸಾದ ನಿಲಯಗಳು ಯಾವುವು?

ಆ) ಧಾರವಾಡ ಜಿಲ್ಲೆಯಲ್ಲಿ ವಿವಿಧ ಬಗೆಯ ಖಾಸಗಿ ಪ್ರಸಾದ ನಿಲಯಗಳು ಎಷ್ಟು? ಅವುಗಳ ಪೂರ್ಣ ಮಾಹಿತಿ ಹಾಗೂ ಅವರಿಗೆ ಪ್ರತಿ ವಿದ್ಯಾರ್ಥಿಗೆ ಸಿಗುವ ತಿಂಗಳ ಅನುದಾನ ಹಾಗೂ ವಿವಿಧ ಸೌಲಭ್ಯಗಳು ಯಾವುವು? (ವಿವರ ನೀಡುವುದು).

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಸ್ವಂತ ಕಟ್ಟಡದಲ್ಲಿ 53 ವಿದ್ಯಾರ್ಥಿನಿಲಯಗಳು ಹಾಗೂ ಬಾಡಿಗೆ ಕಟ್ಟಡದಲ್ಲಿ 59 ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ವಿವರಗಳನ್ನು ಅನುಬಂಧ - 1ರಲ್ಲಿ ನೀಡಿದೆ.

ಆ) ಧಾರವಾಡ ಜಿಲ್ಲೆಯಲ್ಲಿ ಸರ್ಕಾರದ ಅನುದಾನದಿಂದ 25 ಖಾಸಗಿ ಮೆ.ಪೂರ್ವ ಅನುದಾನಿತ ವಿದ್ಯಾರ್ಥಿನಿಲಯಗಳನ್ನು ಹಾಗೂ 12 ಮೆಟ್ರಿಕ್ ನಂತರದ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ವಿವರಗಳನ್ನು ಅನುಬಂಧ -2ರಲ್ಲಿ ನೀಡಲಾಗಿದೆ.

ಅನುಬಂಧ - 1

ಸ್ವಂತ ಕಟ್ಟಡದಲ್ಲಿ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳು

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

1.	ಬಿ.ಸಿ.ವಿದ್ಯಾರ್ಥಿ ನಿಲಯ,	ಹುಬ್ಬಳ್ಳಿ
2.	ಮೆ:ಪೂ:ವಿ. ನಿಲಯ,	ಧಾರವಾಡ
3.	''	ನವಲಗುಂದ
4.	''	ನರಗುಂದ